ಅಧ್ಯಕ್ಷರು : ಆದಷ್ಟು ಬೇಗನೆ ಎಲ್ಲರಿಗೂ ಉತ್ತರ ಕಳುಹಿಸಿ ಕೊಡಬೇಕೆಂದು ಈಗಾಗಲೇ ನಾನು ಸೂಚನೆ ಕೊಟ್ಟಿದ್ದೇನೆ, ಮೊನ್ನೆ ಸಹ ಹೇಳಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು) : ಉತ್ತರ ಕಳುಹಿಸಿ ಕೊಡಬೇಕೆಂದು ನಾನೂ ಕೂಡ ಎಲ್ಲಾ ಇಲಾಖಾ ಕಾರ್ಯದರ್ಶಿಗಳಿಗೆ ಸೂಚನೆ ಕೊಟ್ಟಿದ್ದೇನೆ.

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು :

ಅ) 3ನೇ ಮತ್ತು 4ನೇ ಪಟ್ಟಿ

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು, ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಶ್ರೀ ಆರ್. ಅಶೋಕ್, ಸಾರಿಗೆ ಸಚಿವರ ಪರವಾಗಿ) :

1988ರ ಮೋಟಾರು ವಾಹನಗಳ ಅಧಿನಿಯಮ (1988ರ ಕೇಂದ್ರ ಅಧಿನಿಯಮ 59) ಕಲಂ 212(3)ರ ಪ್ರಕರಣದ ಮೇರೆಗೆ:

1. 1989ರ ಕರ್ನಾಟಕ ಮೋಟಾರು ವಾಹನಗಳ ನಿಯಮಾವಳಿಗೆ ತಿದ್ದುಪಡಿ ಮಾಡಿ ದಿನಾಂಕ: 23.10.2007 ರಂದು ಹೊರಡಿಸಲಾದ ಟಿಆರ್ ಡಿ/235/ಸಾಇಪ/2006ನೇ ಸಂಖ್ಯೆಯ ಅಧಿಸೂಚನೆ.

2. 1989ರ ಕರ್ನಾಟಕ ಮೋಟಾರು ವಾಹನಗಳ ನಿಯಮಾವಳಿಗಳ ನಿಯಮ 9, 12, 20, 31, 67, 84 ಹಾಗೂ 87ಕ್ಕೆ ತಿದ್ದುಪಡಿ ಮಾಡಿ ದಿನಾಂಕ: 14.08.2009 ರಂದು ಹೊರಡಿಸಲಾದ ಟಿಆರ್‌ಡಿ/01/ಟಿಎಂಆರ್/ 2008ನೇ ಸಂಖ್ಯೆಯ ಅಧಿಸೂಚನೆ.

3. 1989ರ ಕರ್ನಾಟಕ ಮೋಟಾರು ವಾಹನಗಳ ನಿಯಮಾವಳಿಗಳ ನಿಯಮ 46 ಎ ಗೆ ತಿದ್ದುಪಡಿ ಮಾಡಿ ದಿನಾಂಕ: 02.02.2010 ರಂದು ಹೊರಡಿಸಲಾದ ಸಾರಿಇ/243/ಸಾಇಪ/2008ನೇ ಸಂಖ್ಯೆಯ ಅಧಿಸೂಚನೆ.

1957ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆ ಕಲಂ 22(4)ರ ಪ್ರಕರಣದ ಮೇರೆಗೆ:

4. 1957ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆಯಡಿಯಲ್ಲಿ ಶ್ರೀ ಯಡತೊರೆ ಜಗದ್ಗುರು ಶ್ರೀ ಯೋಗಾನಂದೇಶ್ವರ ಸರಸ್ವತಿ ಮಹಾ ಸಂಸ್ಥಾನ, ಕೃಷ್ಣರಾಜನಗರ ಇವರು ಹೊಂದಿರುವ ವಾಹನ

ಸಂ. ಕೆಎ 45 618 ಹಾಗೂ ಶ್ರೀ ವೀರಾಂಜನೇಯ ಧಾರ್ಮಿಕ ಹಾಗೂ ದತ್ತಿ ಸಂಸ್ಥೆ (ರಿ) ಬಂಗಾರ ಮಕ್ಕಿ ಹೊನ್ನಾವರ ತಾಲ್ಲೂಕು, ಇವರು ಹೊಂದಿರುವ ವಾಹನ ಮ್ಯಾಕ್ಸಿ ಕ್ಯಾಬ್, ಇವುಗಳಿಗೆ ಸಾರ್ವಜನಿಕ ಹಿತಾಸಕ್ತಿಯಿಂದ ಮೋಟಾರು ತೆರಿಗೆ ಪಾವತಿಯಿಂದ ವಿನಾಯಿತಿ ನೀಡಿ ದಿನಾಂಕ: 05.08.2009 ರಂದು ಹೊರಡಿಸಲಾದ ಸಾರಿಇ/10ಸಾಇನಿ/2009ನೇ ಸಂಖ್ಯೆಯ ಅಧಿಸೂಚನೆ.

5. 1957ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆಯಡಿಯಲ್ಲಿ ಮಿಸ್ಟರ್ ರಿಚರ್ಡ್ ಡೊಮೈನ್ ಹೈಡಿ ಬ್ರಿಟಿಷ್ ಡೆಪ್ಯೂಟಿ ಹೈ ಕಮಿಷನರ್ ರಾಯಭಾರಿ ಕಛೇರಿ ಬೆಂಗಳೂರು ಇವರಿಗೆ ಸಂಬಂಧಿಸಿದ ವಾಹನಕ್ಕೆ ಕರ್ನಾಟಕ ಸರ್ಕಾರವು ನೋಂದಣಿ ಶುಲ್ಕ ಹಾಗೂ ರಸ್ತೆ ತೆರಿಗೆಯಿಂದ ವಿನಾಯಿತಿ ನೀಡಿ ದಿನಾಂಕ: 11.11.2009ರಂದು ಹೊರಡಿಸಲಾದ ಸಾರಿಇ/298/ಸಾಇಪ/2009ನೇ ಸಂಖ್ಯೆಯ ಅಧಿಸೂಚನೆ.

6. 1957ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆಯಡಿಯಲ್ಲಿ ಬೆಂಗಳೂರಿನಲ್ಲಿರುವ ಮಿಸ್ಟರ್. ಫ್ರೆಡ್‌ರಿಚ್ ರಾಹನ್, ಡೆಪ್ಯೂಟಿ ಕನ್ಸಲ್ ಜನರಲ್ ಆಫ್ ಫೆಡರಲ್ ರಿಪಬ್ಲಿಕ್ ಆಫ್ ಜರ್ಮನಿ, ರಾಯಭಾರಿ ಕಛೇರಿಯ ವಾಹನಕ್ಕೆ ಕರ್ನಾಟಕ ಸರ್ಕಾರವು ರಸ್ತೆ ತೆರಿಗೆ ಹಾಗೂ ನೋಂದಣಿ ಶುಲ್ಕದಿಂದ ವಿನಾಯಿತಿ ನೀಡಿ ದಿನಾಂಕ: 11.11.2009ರಂದು ಹೊರಡಿಸಲಾದ ಸಾರಿಇ/297/ಸಾಇಪ/2009ನೇ ಸಂಖ್ಯೆಯ ಅಧಿಸೂಚನೆ.

7. 1957ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆಯಡಿಯಲ್ಲಿ ಬೆಂಗಳೂರಿನಲ್ಲಿರುವ ಮಿಸ್ಟರ್ ರಿಚರ್ಡ್ ಹೈಡಿ ಬ್ರಿಟಿಷ್ ಡೆಪ್ಯೂಟಿ ಹೈ ಕಮಿಷನರ್ ಇವರ ಕಛೇರಿಯ ವಾಹನಕ್ಕೆ ಕರ್ನಾಟಕ ಸರ್ಕಾರವು ರಸ್ತೆ ತೆರಿಗೆ ಹಾಗೂ ನೋಂದಣಿ ಶುಲ್ಕದಿಂದ ವಿನಾಯಿತಿ ನೀಡಿ ದಿನಾಂಕ:12.01.2010ರಂದು ಹೊರಡಿಸಲಾದ ಸಾರಿಇ/334/ಸಾಇಪ/2009ನೇ ಸಂಖ್ಯೆಯ ಅಧಿಸೂಚನೆ.

8. 1957ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆಯಡಿಯಲ್ಲಿ ಬೆಂಗಳೂರಿನಲ್ಲಿರುವ ಮಿಸ್ಟರ್ ರಿಚರ್ಡ್ ಹೈಡಿ ಬ್ರಿಟಿಷ್ ಡೆಪ್ಯೂಟಿ ಹೈ ಕಮಿಷನರ್ ಇವರ ಸ್ವಂತ ವಾಹನಕ್ಕೆ ಕರ್ನಾಟಕ ಸಕಾರವು ನೋಂದಣಿ ಶುಲ್ಕ ಹಾಗೂ ರಸ್ತೆ ತೆರಿಗೆಯಿಂದ ವಿನಾಯಿತಿ ನೀಡಿ ದಿನಾಂಕ: 12.01.2010 ರಂದು ಹೊರಡಿಸಲಾದ ಸಾರಿ ಇ/355/ಸಾಇಪ/2009ನೇ ಸಂಖ್ಯೆಯ ಅಧಿಸೂಚನೆ.

9. 1957ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆಯಡಿಯಲ್ಲಿ ಮಾತಾ ಅಮೃತಾನಂದಮಯಿ ಮಠ, ಬೆಂಗಳೂರು, ಬಿಡಬ್ಲ್ಯೂ ಸೂಪರ್ ಸ್ಪೆಷಾಲಿಟಿ ಐ ಹಾಸ್ಪಿಟಲ್, ಬೆಂಗಳೂರು ಹಾಗೂ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮೆಡಿಕಲ್ ಟ್ರಸ್ಟ್(ರಿ), ಧರ್ಮಸ್ಥಳ, ದಕ್ಷಿಣ ಕನ್ನಡ, ಈ ಸಂಸ್ಥೆಗಳು ಹೊಂದಿರುವ ವಾಹನಗಳಿಗೆ ಸಾರ್ವಜನಿಕ ಹಿತಾಸಕ್ತಿಯಿಂದ ಮೋಟಾರು ವಾಹನ ತೆರಿಗೆ ಪಾವತಿಯಿಂದ ವಿನಾಯಿತಿ ನೀಡಿ ದಿನಾಂಕ: 11.02.2010ರಂದು ಹೊರಡಿಸಲಾದ ಸಾರಿಇ/28/ಸಾಇ ಪ/2010ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತಿದ್ದೇನೆ.

ಶ್ರೀ ಸುರೇಶ್ ಕುಮಾರ್ ಎಸ್. (ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) :

1. 2008ರ ಕರ್ನಾಟಕ ಸಾಮಾನ್ಯ ಸೇವೆಗಳು (ಭಾಷಾಂತರ ನಿರ್ದೇಶನಾಲಯ) (ನೇಮಕಾತಿ) ನಿಯಮಗಳ ಅನುಸೂಚಿಯನ್ನು ತಿದ್ದುಪಡಿ ಮಾಡಿ ದಿನಾಂಕ: 24.02.2009ರಂದು ಹೊರಡಿಸಲಾದ ಸಂವ್ಯ ಶಾಇ/17/ಭಾನಿವಿ/2007ನೇ ಸಂಖ್ಯೆಯ ಅಧಿಸೂಚನೆ.

2. 2001ರ ಕರ್ನಾಟಕ ಸಾಮಾನ್ಯ ಸೇವೆಗಳು (ಭಾಷಾಂತರ ನಿರ್ದೇಶನಾಲಯ) (ನೇಮಕಾತಿ) ನಿಯಮಗಳ ಅನುಸೂಚಿಯನ್ನು ತಿದ್ದುಪಡಿ ಮಾಡಿ ದಿನಾಂಕ: 23.01.2010 ರಂದು ಹೊರಡಿಸಲಾದ ಸಂವ್ಯಶಾಇ/46/ಭಾನಿವಿ/2008ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು, ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

(ಶ್ರೀ ಎಂ.ಪಿ. ರೇಣುಕಾಚಾರ್ಯ (ಅಬಕಾರಿ ಸಚಿವರ ಪರವಾಗಿ) :

ಕರ್ನಾಟಕ ಅಬಕಾರಿ ಕಾಯ್ದೆ ಕಲಂ 71(4) ರನ್ವಯ :

1. ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮಗಳು 1967ರ ನಿಯ 23ಕ್ಕೆ ಅಬಕಾರಿ ನಿಯಮಗಳನ್ನು ತಿದ್ದುಪಡಿ ಮಾಡಿ ದಿನಾಂಕ: 09.02.2010ರಂದು ಹೊರಡಿಸಲಾದ ಎಫ್‌ಡಿ 11 ಪಿಇಎಸ್ 2009ನೇ ಸಂಖ್ಯೆಯ ಅಧಿಸೂಚನೆ.

2. ಕರ್ನಾಟಕ ಅಬಕಾರಿ (ದ್ರಾಕ್ಷಾ ರಸದಿಂದ ಮದ್ಯ ತಯಾರಿಕೆ) ತಿದ್ದುಪಡಿ ಅಧಿನಿಯಮ 2008ರಡಿಯಲ್ಲಿನ ನಿಯಮ 2ಕ್ಕೆ ತಿದ್ದುಪಡಿ ಮಾಡಿ

ದಿನಾಂಕ: 09.02.2010ರಂದು ಹೊರಡಿಸಲಾದ ಎಫ್‌ಡಿ 13 ಪಿಇಎಸ್ 2009ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತಿದ್ದೇನೆ.

I. ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಮತ್ತು ನಗರ ಸಭೆಗಳ ಸಚಿವರು) :

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮದ 48 ಮತ್ತು 49ನೇ ಪ್ರಕರಣಗಳ ಮೇರೆಗೆ :

1. ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ 2008–09ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತಿದ್ದೇನೆ.

II. ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) ಅವರು:

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ 262 (3)ನೇ ಮತ್ತು 300(5)ನೇ ಪ್ರಕರಣದ ಮೇರೆಗೆ:

1. ಮೈಸೂರು ಜಿಲ್ಲಾ ಪಂಚಾಯತ್‌ನ 2007–08ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನಾ ವರದಿ.

2. ಕೊಪ್ಪಳ ಜಿಲ್ಲಾ ಪಂಚಾಯತ್‌ನ 2008–09ನೇ ಸಾಲಿನ ವಾರ್ಷಿಕ ಆಡಳಿತ ವರದಿ.

3. ಗದಗ ಜಿಲ್ಲಾ ಪಂಚಾಯತ್‌ನ 2008–09ನೇ ಸಾಲಿನ ವಾರ್ಷಿಕ ಆಡಳಿತ ವರದಿಗಳನ್ನು ಮಂಡಿಸುತ್ತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್, (ಕಾನೂನು, ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಪರವಾಗಿ) :

1956ರ ಕಂಪನಿ ಅಧಿನಿಯಮದ 619 (ಎ) ಪ್ರಕರಣದ ಮೇರೆಗೆ :

1. ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್‌ನ 2008–09ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತಿದ್ದೇನೆ.